## ಕರಣ್‌ಗೆ ಮದುವೆಯಂತೆ!

ಕರಣ್ ಜೋಹರ್‌ಗೆ ಮದುವೆ ಫಿಕ್ಸ್ ಆಗಿದೆಯೆ? 'ಹೌದು' ಎನ್ನುತ್ತಾರೆ ಬಾಲಿವುಡ್ ಪಂಡಿತರು.

ನ್ಯೂಯಾರ್ಕ್ ಮೂಲಕ ಉದ್ಯಮಿಯೊಬ್ಬರ ಮಗಳು ವಂದನಾ ಎಂಬಾಕೆಯನ್ನು ಕರಣ್ ಮದುವೆಯಾಗುವುದು ನಿಶ್ಚಿತ ಎನ್ನುವ ಸುದ್ದಿ ಹಬ್ಬಿದೆ. ಅದಕ್ಕೆಂದೇ ಇತ್ತೀಚೆಗೆ ಈ ಖ್ಯಾತ ನಿರ್ದೇಶಕ ಪದೇ ಪದೇ ನ್ಯೂಯಾರ್ಕ್, ಲಂಡನ್ ಎಂದು ಓಡಾಡುತ್ತಿದ್ದಾರಂತೆ.

ಮದುವೆ ಸುದ್ದಿ ಏನೇ ಇರಲಿ; 'ಕಾಫೀ ವಿದ್ ಕರಣ್' ಷೋನಲ್ಲಿ ಸಲ್ಮಾನ್ ಖಾನ್ ಭಾಗವಹಿಸುವುದಿಲ್ಲ ಎನ್ನುವುದಂತೂ ಖಚಿತವಾಗಿದೆ. ಈ ಷೋನಲ್ಲಿ ಭಾಗವಹಿಸುವಂತೆ ಕರಣ್, ಸಲ್ಲೂ ಮಿಯಾನನ್ನು ಆಹ್ವಾನಿಸಿದ್ದನಂತೆ. ಆದರೆ ಸಲ್ಲೂ ಮಿಯಾ, 'ನನ್ನ ಚಾರಿಟಿಗೆ ಇಷ್ಟು ಹಣ ಕೊಡು' ಎಂದು ಪಟ್ಟು ಹಿಡಿದನಂತೆ. 'ಹಣ ಕೊಡಬಹುದು; ಆದರೆ ಹಿಂದೆ ಬಚ್ಚನ್ ಆಗಲೀ, ಶಾರೂಕ್ ಆಗಲೀ ನನ್ನ ಷೋನಲ್ಲಿ ಹಣ ಪಡೆಯದೆ ಭಾಗವಹಿಸಿದ್ದಾರೆ. ಈಗ ಸಲ್ಮಾನ್‌ನಿಗೆ ಕೊಡೋದು ಸರಿಯೆ?' ಎನ್ನೋದು ಕರಣ್ ಪ್ರಶ್ನೆ. ಹಾಗಾಗಿ ಷೋ ಕ್ಯಾನ್ಸಲ್!



# ಉಷಾ ಉತ್ತುಪ್ ಎಂಬ 'ಸ್ಟೇಜ್ ಸ್ಟಾರ್!'



ಇತ್ತೀಚೆಗಿನ 'ಸಾಥ್ ಖೂನ್ ಮಾಫ್' ಚಿತ್ರದ ಒಂದು ಹಾಡು ಬಾಲಿವುಡ್‌ನಲ್ಲಿ ದೊಡ್ಡ ಸಂಚಲನವನ್ನೇ ಉಂಟು ಮಾಡಿದೆ. 'ಡಾರ್ಲಿಂಗ್...' ಎಂದು ಆರಂಭವಾಗುವ ಆ ಹಾಡು ಅತ್ತ ಪಾಪ್ ಕೂಡಾ ಅಲ್ಲದ, ಇತ್ತ ಮೆಲೊಡಿಯೂ ಅಲ್ಲದ ವಿಚಿತ್ರ ಸ್ವರ ಸಂಯೋಜನೆ ಹೊಂದಿದ್ದು, ಒಮ್ಮೆ ಕೇಳಿದರೆ ಮತ್ತೊಮ್ಮೆ ಕೇಳಬೇಕೆನ್ನಿಸುವಂತಿದೆ. ತಾರಾ ಸಂಜೆಗಳಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭದ ಮನರಂಜನೆಯ ಕುಣಿತದಲ್ಲಿ ಈ ಹಾಡಿಗೆ ಅಗ್ರಸ್ಥಾನ ಸಲ್ಲುತ್ತಿದೆ.

ಈ ಹಾಡನ್ನು ಆರಂಭದಲ್ಲಿ ಹಾಡಿದವರು ಉಷಾ ಉತ್ತುಪ್. ಆದರೆ ಆರಂಭದ ಬಳಿಕ ಹಾಡಿನ ಸ್ವರ ಬದಲಾಗುತ್ತದೆ. ಉಷಾ ಉತ್ತುಪ್ ಸ್ವರವನ್ನೇ ಹೋಲುವ ಇನ್ನೊಬ್ಬ ಗಾಯಕಿ ರೇಖಾ ಭಾರದ್ವಾಜ್ ಹಾಡನ್ನು ಮುಂದುವರಿಸುತ್ತಾರೆ. ತಮಾಷೆ ಎಂದರೆ ಉಷಾಗೆ ಈ ವಿಷಯವೇ ಗೊತ್ತಿರಲಿಲ್ಲವಂತೆ. ಇಡೀ ಹಾಡನ್ನು ರೆಕಾರ್ಡಿಂಗ್ ಮಾಡಿದಾಗಲೂ ಅವರಿಗೆ ರೇಖಾ ಕೂಡಾ ಹಾಡುತ್ತಾಳೆ ಎನ್ನುವ ವಿಷಯವನ್ನು ನಿರ್ಮಾಪಕರು ತಿಳಿಸಿಲ್ಲವಂತೆ. ಚಿತ್ರ ಬಿಡುಗಡೆಯಾದ ಬಳಿಕವಷ್ಟೇ 'ಅರೆ.. ನನ್ನ ಹಾಡು ಅರ್ಧವೇ ಇದೆ; ಇನ್ನೊಬ್ಬರು ಈ ಹಾಡನ್ನು ಮುಂದುವರಿಸಿದ್ದಾರೆ' ಎಂದು ಆಕೆಗೆ ಆಶ್ಚರ್ಯವೋ ಆಶ್ಚರ್ಯ!

ಹಾಗೆಂದು ಗಂಡು ಕಂಠದ, ವಿಭಿನ್ನ ಗಾಯಕಿ ಉಷಾ ಉತ್ತುಪ್ ಇದಕ್ಕೆಲ್ಲ ತಲೆ ಕೆಡಿಸಿಕೊಂಡಿಲ್ಲವಂತೆ. "ಇದೇನೂ ಮೊದಲಲ್ಲ ಬಿಡಿ. ಬಹಳ ಹಿಂದೆ ದೇವ್‌ಆನಂದ್ ಸಾಹೇಬರ 'ಹರೇ ಕೃಷ್ಣ..' ಸಿನಿಮಾಕ್ಕೆ 'ಧಮ್ ಮಾರೋ ಧಮ್' ಹಾಡನ್ನು ಇಡಿಯಾಗಿ ಹಾಡಿ ರೆಕಾರ್ಡ್ ಮಾಡಿಕೊಂಡಿದ್ದರು. ಆದರೆ ಸಿನಿಮಾ ಬಿಡುಗಡೆಯಾದಾಗ ನನ್ನ ಹಾಡು ಇರಲಿಲ್ಲ. ಆಶಾಜೀ ಧ್ವನಿಯಲ್ಲಿ ಹಾಡಿತ್ತು..." ಎಂದು ಅವರು ನಗೆಯಾಡುತ್ತಾರೆ.

ಉಷಾ ಇಂಥವನ್ನೆಲ್ಲ ವಿವಾದವನ್ನಾಗಿ ಎಂದೂ ಮಾಡಿಲ್ಲ. ಅವರು ಒಂದು ಸಿನಿಮಾ ಹಾಡು ಹಾಡಿ, ಅದು ಜನಪ್ರಿಯವಾದರೆ 50 ಸ್ಟೇಜ್ ಪ್ರೋಗ್ರಾಮ್‌ಗಳು ಸಿಗುತ್ತವೆ. ಅದರಲ್ಲೇ ಆಕೆಗೆ ತೃಪ್ತಿ. ಇವತ್ತಿಗೂ ಉಷಾ ಅವರನ್ನು ಸ್ಟೇಜ್ ಷೋನಲ್ಲಿ ಬೀಟ್ ಮಾಡಬಲ್ಲ ಇನ್ನೊಬ್ಬ ಗಾಯಕಿ ಬಾಲಿವುಡ್‌ನಲ್ಲಿ ಇಲ್ಲ! ಹಾಗಾಗಿಯೇ ಇತ್ತೀಚಿನ ಕಾರ್ಯಕ್ರಮಗಳಲ್ಲಿ ಅವರು, 'ಉಷಾ ಬದನಾಮ್ ಹುಯಿ ಡಾರ್ಲಿಂಗ್ ತೇರೇ ಲಿಯೇ' ಎಂದೋ, 'ಮೈ ನೇಮ್ ಈಸ್ ಉಷಾ.. ಉಷಾ ಕಿ ಜವಾನೀ' ಎಂದೋ ಹಾಡಿ ಪ್ರೇಕ್ಷಕರನ್ನು ಹುಚ್ಚೆಬ್ಬಿಸಲು ಸಾಧ್ಯವಾಗಿದೆ. ಸ್ಟೇಜ್ ಷೋನಲ್ಲಿ ಈ ಹಾಡುಗಳ ಒರಿಜಿನಲ್ ಗಾಯಕಿ ಎಂಬುದನ್ನೇ ಮರೆತು ಜನ ಉಷಾ ಅವರನ್ನು ಸ್ಟಾರ್ ಮಾಡುತ್ತಾರೆ!

■ ಬಿಂದು